ನ್ಯಾಯವನ್ನು ಪ್ರೀತಿಸುವ ಬಗ್ಗೆ ಒಟ್ಟು ಹನ್ನೊಂದು ಭಾಗಗಳಲ್ಲಿ ಕಪ್ಪು ಜನರ ಪ್ರೀತಿಯ ಹಲವು ನೆಲೆಗಳನ್ನು ಹುಡುಕಾಟ ಮಾಡಿದ್ದಾರೆ. ಮೊದಲಿಗೆ ಬಡ, ಮಧ್ಯಮವರ್ಗದ ಕಪ್ಪು ಜನರಿಗೆ ಕ್ರಿಶ್ಚಿಯನ್ ಧರ್ಮಗುರುಗಳು ಪ್ರೀತಿಯನ್ನು ಬೋಧಿಸುತ್ತಿದ್ದರು. ಈಗ ಆ ಚರ್ಚುಗಳು ಕಾರ್ಪೋರೇಟ್ ಕಲ್ಚರ್ ರೂಢಿಸಿಕೊಂಡು ಬಡ ಕಪ್ಪು ಜನರನ್ನು ಕಡೆಗಣಿಸಿವೆ. ತಮ್ಮನ್ನು ತಾವು ಗಾಢವಾಗಿ ಪ್ರೀತಿಸಲು ಕಲಿತರೆ, ಇತರರನ್ನು ಪ್ರೀತಿಸಲು ಶುರುಮಾಡುತ್ತೇವೆ. ಸ್ವ-ಪ್ರೀತಿ ಸ್ವಾಭಿಮಾನವನ್ನು ಬೆಳೆಸುತ್ತದೆ. ಹಾಗಾಗಿ ಮೊದಲಿಗೆ ಕಪ್ಪು ಜನರಲ್ಲಿ ಕಾಣೆಯಾದ ಸ್ವ ಪ್ರೀತಿಯನ್ನು ಬೆಳೆಸಬೇಕಾಗಿದೆ ಎನ್ನುತ್ತಾರೆ.

ಬಿಳಿಯ ಶ್ರೇಷ್ಠತೆಯ ಭಯೋತ್ಪಾದನೆ ಮತ್ತು ಜನಾಂಗೀಯ ದಾಳಿಗಳು ಹೇಗೆ ಕಪ್ಪು ಜನರ ಮನಸ್ಸಿನಲ್ಲಿ ಆಳವಾದ ಗಾಯಗಳನ್ನು ಮಾಡಿವೆ ಎಂದು ವಿವರಿಸುತ್ತಲೇ, ನಮ್ಮ ಸಮುದಾಯಗಳಿಗೆ ಆಗಿರುವ ಗಾಯಗಳ ನೋವು ವಾಸಿಯಾಗಲು ಪ್ರೀತಿ ಎಂಬ ನಿಸರ್ಗದ ಮೂಲಕ್ಕೆ ಹೋಗಬೇಕು. ಈ ಪ್ರೀತಿಯೇ ಕಾಳಜಿ, ಗೌರವ, ತಿಳಿವು ಮತ್ತು ಹೊಣೆಗಾರಿಕೆಯ ಹಲವು ಶಕ್ತಿಗಳನ್ನು ಜಾಗೃತಗೊಳಿಸುತ್ತದೆ. ಆಫ್ರಿಕಾದ ಚರಿತ್ರೆಯಲ್ಲಿ ಕಪ್ಪು ನಾಯಕರೆಲ್ಲಾ ಪ್ರೀತಿಯ ಮಹತ್ವವನ್ನು ಹೇಳಿದವರೇ ಆಗಿದ್ದಾರೆ ಎನ್ನುವ ಬೆಲ್ ಹುಕ್ಸ್, ಪ್ರೀತಿಯು ಕಪ್ಪು ಜನರಲ್ಲಿ ಮತ್ತೆ ಮೊಳೆಯಬೇಕಾಗಿರುವ ಅಗತ್ಯವನ್ನೂ, ಚಿಗುರಬೇಕಾದ ರೀತಿಯನ್ನೂ ಈ ಕೃತಿಯಲ್ಲಿ ಮಂಡಿಸುತ್ತಾರೆ. ವಸಾಹಾತೀಕರಣದಿಂದ ಮುಕ್ತವಾದ ನಂತರ ಶುರುವಾದ ಬೆರಕೆ ಸ್ಕೂಲುಗಳಲ್ಲಿ ಕಪ್ಪು ವಿದ್ಯಾರ್ಥಿಗಳ ಕಲಿಕೆಗೆ ಹೇಗೆ ಹಿನ್ನಡೆಯಾಯಿತು ಎಂದು ವಿವರಿಸುತ್ತಾರೆ.

ಕಪ್ಪು ಹಣವಂತರು, ಶ್ರೀಮಂತ ವರ್ಗವು ಕ್ರಮೇಣ ಕಪ್ಪು ಜನರನ್ನೇ ಶೋಷಿಸಲು ಶುರುಮಾಡಿದಾಗ, ಕಪ್ಪು ಜನರ ಎಲ್ಲಾ ಸಮಸ್ಯೆಗಳಿಗೂ ಬಿಳಿಯರೇ ಕಾರಣ ಎನ್ನುವುದನ್ನು ದೊಡ್ಡದಾಗಿ ಬಿಂಬಿಸಲಾಗುತ್ತದೆ. ಈ ಮೂಲಕ ಕಪ್ಪು ಜನರ ಎಲ್ಲಾ ಸಮಸ್ಯೆಗಳ ಮೂಲ ಬಿಳಿಯರೇ ಎನ್ನುವ ಅತಿರೇಕಕ್ಕೆ ಹೋಗುತ್ತಾರೆ. ಈ ಮಧ್ಯೆ ಕಪ್ಪು ಜನರ ಸಮಸ್ಯೆಗಳ ಬಗ್ಗೆ ಹೋರಾಡುವ ಬಿಳಿಯರನ್ನು ಅನುಮಾನದಿಂದ ನೋಡಲಾಗುತ್ತದೆ. ಕಪ್ಪು-ಬಿಳಿ ಬೆರಕೆ ಶಾಲೆಗಳಲ್ಲಿ ಬೋಧಿಸುವ ಬಿಳಿಯ ಶಿಕ್ಷಕರನ್ನು ಗೇಲಿ ಮಾಡಿ ಅವರಿಂದ ಕಲಿಯುವಿಕೆಯಲ್ಲಿ ವಂಚಿತರಾಗುತ್ತಾರೆ. ಹೀಗೆ ಕಪ್ಪು ಜನರ ಒಳಗೇ ಇರುವ ಕೇಡುಗಳನ್ನೂ ಕೂಡ ಬಗೆಹರಿಸಿಕೊಳ್ಳಬೇಕಿದೆ ಎನ್ನುವುದು ಬೆಲ್ ಹುಕ್ಸ್ ನಿಲುವು.

ಪಿತೃಪ್ರಧಾನ ಬಿಳಿಯ ಪುರುಷರು ಕಪ್ಪು ಪುರುಷರ ಬಗ್ಗೆ ಹತ್ತಾರು ಮಿಥ್‌ಗಳನ್ನು ಹುಟ್ಟಿಸಿದ್ದಾರೆ. ಕಪ್ಪು ಮಹಿಳೆಯರು ಕಪ್ಪು ಪುರುಷರ ಪುರುಷತ್ವವನ್ನು ನಾಶ ಮಾಡುತ್ತಾರೆ. ಕಪ್ಪು ಪುರುಷರು ಮತ್ತೆ ಪುರುಷತ್ವ ಪಡೆಯಲು ಸೈನ್ಯ ಸೇರಬೇಕು ಎನ್ನುವ ಮಿಥ್ ಹುಟ್ಟುಹಾಕುತ್ತಾರೆ. ಹೀಗೆ ಕಪ್ಪು ಪುರುಷರು ಕಪ್ಪು ಸ್ತ್ರೀಯರನ್ನು ಸದಾ ದ್ವೇಷಿಸುವ ಹಾಗೆ ಮಾಡಲಾಯಿತು ಎಂದು ವಿವರಿಸುತ್ತಾರೆ. ಗಂಡಾಳ್ವಿಕೆ ಸಮಾಜದಲ್ಲಿ ಗಂಡಿಗೆ ಸಂಭ್ರಮ, ಹೆಣ್ಣಿಗೆ ತಾತ್ಸಾರ ಇರುವಂತೆ, ಕಪ್ಪು ತಾಯಂದಿರಿಗೆ ಹುಟ್ಟಿದ ಮಗು ಕಂದುಬಣ್ಣದ್ದಾದರೆ ಖುಷಿಯನ್ನೂ, ಕಡುಗಪ್ಪಾದರೆ ಬೇಸರ ಪಡುವುದನ್ನೂ ಗಮನ ಸೆಳೆಯುತ್ತಾರೆ.

ಪ್ರಸಕ್ತ ಕೃತಿಯಲ್ಲಿ ಬೆಲ್ ಹುಕ್ಸ್ ಸಂಶೋಧನಾ ವಿಧಾನ ಭಿನ್ನವಾಗಿದೆ. ನೂರಾರು ಹೆಣ್ಣು-ಗಂಡುಗಳನ್ನು ಮಾತನಾಡಿಸಿದ ಮೌಖಿಕ ನಿರೂಪಣೆಗಳಿವೆ. ಕಪ್ಪು ಜನರನ್ನು ಆಧರಿಸಿದ ಅಧ್ಯಯನ ಸಂಶೋಧನೆಗಳಿವೆ. ಕಪ್ಪು ಮತ್ತು ಬಿಳಿ ಜನರು ಬರೆದ ನೂರಾರು ಕಥೆ-ಕಾವ್ಯ, ಕಾದಂಬರಿಗಳಿವೆ. ಕಪ್ಪು ಜನರ ವಿಮೋಚನೆಗಾಗಿ ನಡೆದ ಹೋರಾಟದ ಚಾರಿತ್ರಿಕ ವಿವರಗಳಿವೆ. ಸರ್ಕಾರದ ವರದಿಗಳಿವೆ. ಹಾಗೆಯೇ ಜನಪ್ರಿಯ ಸಂಸ್ಕೃತಿಯ ನೂರಾರು ಸಿನಿಮಾ, ಟೀವಿ ಶೋಗಳನ್ನು, ಅಂತರ್ಜಾಲ ಮಾಧ್ಯಮಗಳನ್ನು ಪರಿಶೀಲಿಸಿದ್ದಾರೆ. ಈ ಮೂಲಕ ಕಪ್ಪು ಜನರ ಬಗೆಗಿನ ಮಿಥ್‌ಗಳನ್ನು ಜನಪ್ರಿಯ ಸಂಸ್ಕೃತಿ, ಆಧುನಿಕ ಮಾಧ್ಯಮಗಳು ಹೇಗೆ ಬಿಂಬಿಸುತ್ತವೆ ಎನ್ನುವುದನ್ನು ಪರಿಶೀಲಿಸಲಾಗಿದೆ. ಕಪ್ಪು ಪಾಪ್ ಸಂಗೀತಗಾರರು ಪ್ರೀತಿಯನ್ನು ಹಂಬಲಿಸುವ ಹಾಡುಗಳನ್ನು ಹೇಗೆ ಹಾಡುತ್ತಾರೆ, ಟೀವಿ ಶೋಗಳು ಕಪ್ಪು ಕುಟುಂಬಗಳನ್ನು ಹೇಗೆ ಏಕಮುಖವಾಗಿ ತೋರಿಸುತ್ತವೆ ಎನ್ನುವುದನ್ನು ವಿವರಿಸುತ್ತಾರೆ. ಇಡೀ ಕೃತಿಯಲ್ಲಿ ಲೇಖಕಿಯ ಅಪಾರ ಶ್ರಮ ಮತ್ತು ಸೃಜನಶೀಲತೆ ಕಾಣುತ್ತದೆ.

ಈ ಕೃತಿಯಲ್ಲಿನ ಕಪ್ಪು ಜನರ ಬದಲಿಗೆ ಅಸ್ಪೃಶ್ಯರು, ಬಿಳಿಯರು ಬದಲಿಗೆ ಮೇಲ್ಜಾತಿಗಳು ಎಂದು